673 (417) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ರೈತರಿಗೆ ಕೊಡುತ್ತಿರುವ ಬೆಂಬಲ ಬೆಲೆಯು ರೈತರಿಗೆ ತಲುಪದೆ ಮಧ್ಯವರ್ತಿಗಳು ಹಾಗೂ ಮಾರಾಟಗಾರರ ಪಾಲಾಗುತ್ತಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

675 (921) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006ರಲ್ಲಿ ಮಂಡಿಸಲಾದ ಆಯವ್ಯಯದಲ್ಲಿ ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಯಾವ ಯಾವ ಹೊಸ ಯೋಜನೆಗಳನ್ನು ಪ್ರಕಟಿಸಲಾಗಿದೆ ,

ಆ) ಈ ಪೈಕಿ ಎಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ, (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) ,

ಇ) ಈ ಯೋಜನೆಗಾಗಿ ಮೀಸಲಿಡಲಾಗಿರುವ ಹಣವೆಷ್ಟು ,

ಈ) ಈ ಪೈಕಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ಇಲ್ಲಿಯವರೆಗೆ (ದಿನಾಂಕ 15 1 2007ರವರೆವಿಗೆ) ಖರ್ಚು ಮಾಡಲಾದ ಹಣವೆಷ್ಟು , (ಜಿಲ್ಲಾವಾರು ಹಾಗೂ ಕಾರ್ಯಕ್ರಮವಾರು ವಿವರ ಒದಗಿಸುವುದು),

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) 2006–07ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಇಲಾಖೆಗೆ ಸಂಬಂದಿಸಿದಂತೆ, ಈ ಕೆಳಕಂಡ ಹೊಸ ಯೋಜನೆಗಳನ್ನು ಘೋಷಿಸಲಾಗಿದೆ

1 ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ಎತ್ತು ಮತ್ತು ಎತ್ತಿನ ಗಾಡಿಗಳ ವಿವರಣೆ

2 ರಿಯಾಯಿತಿ ದರದಲ್ಲಿ ಪ್ರತಿ ತಾಲ್ಲೂಕಿಗೆ ತಲಾ 20ರಂತೆ ಟ್ರಾಕ್ಟರ್, ಮಿನಿ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳ ವಿತರಣೆ